ಮಂಡ್ಯ ಜಿಲ್ಲೆಯಲ್ಲಿ ಸೀಮೆಎಣ್ಣೆ ವಿತರಣೆಯಲ್ಲಿ ಕೊರತೆ

೨೭೨(೭೨೮) ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ):—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಮಂಡ್ಯ ಜಿಲ್ಲೆಯಲ್ಲಿ ವಿವಿಧ ತಾಲ್ಲೂಕುಗಳಲ್ಲಿರುವ ಕಾರ್ಡುದಾರರ ಸಂಖ್ಯೆ ಎಷ್ಟು ?

ಆ) ಆ ಕಾರ್ಡು ಸರದಾರರಿಗೆ ಲಭ್ಯವಾಗುತ್ತಿರುವ ಸೀಮೆಎಣ್ಣೆ ಪ್ರಮಾಣವೆಷ್ಟು?

ಇ) ಮಂಡ್ಯ ಜಿಲ್ಲೆಯಲ್ಲಿ ಇನ್ನೂ ಕೂಡ ಕಾರ್ಡುಗಳನ್ನು ಅರ್ಹ ಫಲಾನುಭವಿಗಳಿಗೆ ಹಂಚ ಬೇಕಾಗಿರುವುದನ್ನು ಸರ್ಕಾರ ಮನಗಂಡಿದೆಯೇ ?

ಈ) ಕರ್ನಾಟಕ ರಾಜ್ಯಕ್ಕೆ ಕೇಂದ್ರದಿಂದ ಸರಬರಾಜಾಗುತ್ತಿರುವ ಸೀಮೆಎಣ್ಣೆ ಪ್ರಮಾಣದಲ್ಲಿ ಕೊರತೆ ಏನಾದರೂ ಇದೆಯೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಮಾಹಿತಿ ಕೆಳಕಂಡಂತಿದೆ

	ತಾಲ್ಲೂಕಿನ ಹೆಸರು	ತ್ರಿವರ್ಣ ಪಡಿತರ ಚೀಟಿ	ಕೊಳಚೆ ಪ್ರದೇಶ ತ್ರಿವರ್ಣ ಪಡಿತರ ಚೀಟಿ	ಕೇಸರಿ ಪಡಿತರ ಚೀಟಿ	ಫೋಟೋ ಪಡಿತರ ಚೀಟಿ	ಒಟ್ಟು
೧)	ಮಂಡ್ಯ	೩೧೦೦೦	೩೫೯೮	೨೪೨೫೭	೨೧೨೭೭	೮೦೧೩೨
೨)	ಮದ್ದೂರು	೨೪೯೬೩	೫೮೯	೨೪೧೮೨	೩೮೬೩	೫೩೫೯೭
೩)	ಮಳವಳ್ಳಿ	೨೬೯೨೦	೫೩೪	೧೩೫೫೦	೫೧೫೨	೪೫೮೫೬
೪)	ಪಾಂಡವಪುರ	೧೬೩೨೭	೨೫೪	೧೦೯೫೪	೩೧೯೫	೩೦೭೩೦
೫)	ಶ್ರೀರಂಗಪಟ್ಟಣ	೧೪೨೪೮	೧೪೨೫	೮೪೯೦	೪೯೬೮	೩೩೫೩೧
೬)	ಕೆ. ಆರ್. ಪೇಟೆ	೯೯೫೭೭	—	೧೯೫೪೩	—	೪೯೧೨೦
೭)	ನಾಗಮಂಗಲ	೨೪೦೦೦	—	೧೩೮೯೧	—	೩೭೮೯೧
	ಒಟ್ಟು	೧೭೧೦೩೫	೬೮೦೦	೧೧೪೫೫೭	೩೮೪೫೫೫	೩೩೦೮೫೫೭

ಆ) ಮಂಡ್ಯ ಜಿಲ್ಲೆಗೆ ಪ್ರಸ್ತುತ ೧೨೫೬ ಕೆ. ಎಲ್. ಪ್ರತಿ ತಿಂಗಳೂ ಬಿಡುಗಡೆ ಆಗುತ್ತಿದ್ದು, ಮಂಡ್ಯ ನಗರ ಪ್ರದೇಶದ ಕಾರ್ಡುದಾರರಿಗೆ ತಲಾ ೭ ಲೀಟರ್, ಗ್ಯಾಸ್ ಸೌಲಭ್ಯವಿರುವವರಿಗೆ ತಲಾ ೨ ಲೀಟರ್, ಇತರ ಪಟ್ಟಣ ಪ್ರದೇಶದ ಕಾರ್ಡುದಾರರಿಗೆ ತಲಾ ೫ ಲೀಟರ್ ಹಾಗೂ ಗ್ರಾಮಾಂತರ ಪ್ರದೇಶದ ಕಾರ್ಡುದಾರರಿಗೆ ತಲಾ ೩ ಲೀಟರ್‌ನಂತೆ ವಿತರಿಸಲಾಗುತ್ತಿದೆ.

ಇ) ಮಂಡ್ಯ ಜಿಲ್ಲೆಯಲ್ಲಿ ತ್ರಿವರ್ಣ ಹಸಿರು ಕಾರ್ಡು ವಿತರಿಸಲು ೨,೫೬,೨೬೮ ಫಲಾನುಭವಿಗಳನ್ನು ಗುರುತಿಸಲಾಗಿದ್ದು ಅವರಲ್ಲಿ ೧,೨೭,೮೫೫ ಕಾರ್ಡು ವಿತರಿಸಿದ್ದು, ಇನ್ನೂ ೭೮,೪೫೩ ಫಲಾನುಭವಿಗಳಿಗೆ ವಿತರಿಸಬೇಕಾಗಿರುತ್ತದೆ. ವಿತರಿಸುವ ಕೆಲಸ ನಡೆಯುತ್ತಿದೆ.

ಈ) ಹೌದು. ಕೊರತೆ ಇದೆ. ರಾಜ್ಯದ ಬೇಡಿಕೆಯು ೭೨,೫೦೦ ಕೆ. ಎಲ್. ಆಗಿದ್ದು, ಕೇಂದ್ರವು ಈಗ ಕೇವಲ ೪೮,೩೫೨ ಕೆ. ಎಲ್. ಬಿಡುಗಡೆ ಮಾಡುತ್ತಿದೆ.

ಶ್ರೀ ಎಂ. ಎಸ್. ಆತ್ಮಾನಂದ.—ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ೭೯ ಸಾವಿರ ಫಲಾನುರ್ಭ ಗಳಿಗೆ ಈ ಕಾರ್ಡನ್ನು ವಿತರಿಸಬೇಕಾದರೆ ಅವಶ್ಯಕತೆ ಇದೆ. ಇನ್ನು ಎಷ್ಟು ದಿವಸಗಳಲ್ಲಿ ಕಾರ್ಡ್‌ವಿ ಕೊಡುತ್ತೀರಿ ಎಂದು ಕೇಳುತ್ತಾ, ನಗರಪ್ರದೇಶದಲ್ಲಿ ಗ್ಯಾಸ್ ಇರುವ ಕಾರ್ಡ್‌ದಾರರಿಗೆ ೨ ಲೀಟರ್ ಕೊಡುತ್ತಾ ಇದ್ದಾರೆ. ಆದರೆ ಈಗ ಗ್ಯಾಸನ್ನು ಯಾವರೀತಿ ವಿತರಣೆ ಮಾಡುತ್ತಾರೆ ಎಂದು

ಗೊತ್ತಿರುವ ವಿಚಾರ. ಆದ ಕಾರಣ ಅವರಿಗೂ ಕೂಡ ಈ ಪ್ರಮಾಣವನ್ನು ಹೆಚ್ಚುಮಾಡಬೇಕೆಂದು ಕೇಳಿ, ಗ್ರಾಮೀಣಪ್ರದೇಶದಲ್ಲಿ ವಿದ್ಯುತ್ ಬಹಳ ಅಭಾವ ಇರುವುದರಿಂದ ಆ ಕಾರ್ಡ್‌ದಾರರಿಗೆ ೩ ಲೀಟರ್‌ಗಿಂತ ಹೆಚ್ಚಿಗೆ ಕೊಡಬೇಕೆಂದು ನಾನು ಮಂತ್ರಿಗಳಿಗೆ ವಿನಂತಿಸಿ ಕೊಳ್ಳುತ್ತೇನೆ ಹಾಗೂ ರಾಜ್ಯಕ್ಕೆ ಬರುತ್ತಿರುವ ಶೇಕಡಕ್ಕಿಂತಹ ಸೀಮೆ ಎಣ್ಣೆ ಪ್ರಮಾಣದಲ್ಲಿ ಏನು ಕೊರತೆ ೨೪೦೦ ಲೀಟರ್‌ಗಿಂತ ಹೆಚ್ಚು ಇದೆ ಇವನ್ನು ತುಂಬಲು ಸರಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂದು ಕೇಳಬಯಸುತ್ತೇನೆ.

ಶ್ರೀಮತಿ ಮನೋರಮಾ ಪದ್ಮರಾಜ್.—ಬಾಕಿ ಉಳಿದಿರುವಕ್ಕಿಂತಹ ಕಾರ್ಡುಗಳ ವಿತರಣೆಯನ್ನು ಒಂದು ತಿಂಗಳೊಳಗೆ ಮಾಡುತ್ತೇವೆ. ಗ್ರಾಮಾಂತರ ಪ್ರದೇಶದಲ್ಲಿ ಗ್ಯಾಸ್ ಇರುವವರಿಗೆ ೨ ಲೀಟರ್ ಸೀಮೆಎಣ್ಣೆ ಕೊಡುತ್ತಿದ್ದೀರಿ. ಇದು ಸಾಲುವುದಿಲ್ಲ ಮೂರು ಲೀಟರ್ ಕೊಡಿ ಎಂದು ಹೇಳುತ್ತಿದ್ದಾರೆ. ಕೇಂದ್ರ ಸರಕಾರದ ಉದಾರ ನೀತಿಯಿಂದಾಗಿ ಈಗಾಗಲೇ ಕೆಲವು ಖಾಸಗಿ ವ್ಯಾಪಾರಿಗಳು ಸೀಮೆಎಣ್ಣೆಯನ್ನು ಆಮದು ಮಾಡಿಕೊಂಡು ಈ ಹೋಟೆಲ್ ಮತ್ತು ಬೇರೆ ಉದ್ಯಮದವರಿಗೆ ಅದನ್ನು ಸರಬರಾಜು ಮಾಡುವುದರಿಂದ ನಮಗೆ ಅದಷ್ಟೂ ಸೀಮೆ ಎಣ್ಣೆ ಉಳಿಯುವ ಲಕ್ಷಣಗಳು ಉಂಟು. ಬೋಗಸ್ ಕಾರ್ಡ್‌ಗಳನ್ನು ಗುರುತಿಸಿದ್ದರಿಂದ ೧,೧೪,೦೦೦ ಕಾರ್ಡನ್ನು ಮುಟ್ಟುಗೋಲು ಹಾಕಿದ್ದೇವೆ. ಇದರಿಂದಾಗಿ ೩೦೦ ಕಿಲೋ ಲೀಟರ್ ಏನು ಸೀಮೆ ಎಣ್ಣೆ ಉಳಿಯುತ್ತದೆ, ಅದನ್ನು ಗ್ರಾಮಾಂತರ ಪ್ರದೇಶಕ್ಕೆ ಕಳಿಸಿಕೊಟ್ಟು ಅವರ ಕಷ್ಟವನ್ನು ನೀಗಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಸ್. ಆತ್ಮಾನಂದ.—ಕೇಂದ್ರ ಸರಕಾರದಿಂದ ಬಹಳ ಕಡಿಮೆ ಬರುತ್ತಿದೆ, ಸಾಕಾದಷ್ಟು ಸೀಮೆ ಎಣ್ಣೆ ಬರುತ್ತಿಲ್ಲ. ಇದನ್ನು ಹೆಚ್ಚಿಸಲಿಕ್ಕೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ.

ಶ್ರೀಮತಿ ಮನೋರಮಾ ಪದ್ಮರಾಜ್.—ಇದರ ಬಗ್ಗೆ ನಮ್ಮ ರಾಜ್ಯದ ಲೋಕಸಭಾ ಸದಸ್ಯರುಗಳಿಗೆ ತಾವು ಆಲ್ಲಿ ಪ್ರಯತ್ನ ಮಾಡಿ ಎಂದು ಮನವಿ ಮಾಡಿದ್ದೇವೆ. ನಾವು ಸದಾಕಾಲ ದೆಹಲಿಗೆ ಹೋದಾಗ ನಮ್ಮ ಅಧಿಕಾರಿಗಳು ಆಲ್ಲಿಗೆ ಹೋದಾಗ ಕೇಂದ್ರದ ಮಾನ್ಯ ಮಂತ್ರಿಗಳನ್ನು ಸಹ ಕೇಳುತ್ತಿದ್ದೇವೆ. ಇದು ಪರರಾಷ್ಟ್ರವನ್ನು ಅವಲಂಬಿಸಿಕೊಂಡಿರುವುದರಿಂದ ಇದರ ಬಗ್ಗೆ ಹೆಚ್ಚು ಹೇಳಲು ಹೋಗುವುದಿಲ್ಲ, ಅವರಿಗೆ ಎಷ್ಟು ಸಾಧ್ಯವೋ ಅಷ್ಟು ಕೊಡುತ್ತಿದ್ದಾರೆ. ಕಳೆದ ೩ ತಿಂಗಳಿಂದ ೮೦೦ ಕಿಲೋ ಲೀಟರ್ ಅನ್ನು ಅವರು ಹೆಚ್ಚು ಮಾಡಿದ್ದಾರೆ.

ಮತದಾರರಿಗೆ ಗುರುತು ಚೀಟಿ ನೀಡಿಕೆ ಕುರಿತು

೨೬೩ (೬೨೫) ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಚುನಾವಣಾ ಆಯೋಗದಿಂದ ಗುರುತಿನ ಚೀಟಿಯ ಬಗ್ಗೆ ಪ್ರಸ್ತಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮುಂಬರುವ ವಿಧಾನಸಭಾ ಚುನಾವಣೆಯೊಳಗೆ ಮತದಾರರಿಗೆ ಗುರುತಿನ ಚೀಟಿಯ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) ಇವರ ಪರವಾಗಿ ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ನಮ್ಮ ರಾಜ್ಯದ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಈ ವರ್ಷದಲ್ಲಿ ನಡೆಸುವ ಸಂಭವ ವಿರುವುದರಿಂದ ಮತದಾರರಿಗೆ ಗುರುತಿನ ಚೀಟಿಯ ಕಡ್ಡಾಯವಿಲ್ಲ. ಆದಾಗ್ಯೂ ಈ ವಿಷಯದಲ್ಲಿ ಎಲ್ಲಾ ಪೂರ್ವಸಿದ್ಧತೆಗಳನ್ನು ಮಾಡಲಾಗುತ್ತಿದೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಅಧ್ಯಕ್ಷರೆ, ಚುನಾವಣಾ ಆಯೋಗದಿಂದ ಗುರುತಿನ ಚೀಟಿ ಬಗ್ಗೆ ಪ್ರಸ್ತಾಪಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ "ಹೌದು" ಎಂದು ಹೇಳಿದ್ದಾರೆ. ಅದೇ ರೀತಿ ಮುಂಬರುವ ವಿಧಾನಸಭಾ ಚುನಾವಣೆಯೊಳಗೆ ಮತದಾರರಿಗೆ ಗುರುತಿನ ಚೀಟಿಯ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆಯೇ ಎನ್ನುವುದಕ್ಕೆ ನಮ್ಮ ರಾಜ್ಯದಲ್ಲಿ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಈ ವರ್ಷದಲ್ಲಿ ನಡೆಸುವ ಸಂಭವವಿರುವುದರಿಂದ ಮತದಾರರಿಗೆ ಗುರುತಿನ